**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**

ಸಿಸಿ ನಂಬರ್ **131/2019**

ಫಿರ್ಯಾದಿ ಹಾವೇರಿ ಶಹರ ಪೊಲೀಸ ಠಾಣೆ

ವಿರುದ್ದ

ಆರೋಪಿತರು

**1.** ಮಂಜು ನೀಲಪ್ಪ ಹಾವನೂರ
ವಯಾಃ **37** ವರ್ಷ**,** ಉದ್ಯೋಗಃ ಕೃಷಿ
ಸಾಃ ಶಿವಲಿಂಗ ನಗರ**,** ಹಾವೇರಿ

**2.** ಶಿವರಾಜ ನೀಲಪ್ಪ ಹಾವನೂರ
ವಯಾಃ **30** ವರ್ಷ**,** ಉದ್ಯೋಗಃ ನೌಕರಿ
ಸಾಃಶಿವಲಿಂಗ ನಗರ**,** ಹಾವೇರಿ

**3.** ರವಿ ನೀಲಪ್ಪ ಹಾವನೂರ
ವಯಾಃ **28** ವರ್ಷ**,** ಉದ್ಯೋಗಃ ಕೂಲಿ
ಸಾಃ ಶಿವಲಿಂಗ ನಗರ**,** ಹಾವೇರಿ

**4.** ನೀಲಪ್ಪ ನಿಂಗಪ್ಪ ಹಾವನೂರ
ವಯಾಃ **65** ವರ್ಷ**,** ಉದ್ಯೋಗಃ ನಿವೃತ್ತ
ಸಾಃ ಶಿವಲಿಂಗ ನಗರ**,** ಹಾವೇರಿ

**5.** ರತ್ನವ್ವ ನೀಲಪ್ಪ ಹಾವನೂರ
ವಯಾಃ **59** ವರ್ಷ**,** ಉದ್ಯೋಗಃ ಮನೆಗೆಲಸ
ಸಾಃ ಶಿವಲಿಂಗ ನಗರ**,** ಹಾವೇರಿ

**ದೋಷಾರೋಪಣೆ**

ಶ್ರೀ ವಾಸುದೇವ.ಆರ್.ಗುಡಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ದಿಃ02-10-2019 ರಂದು ಮುಂಜಾನೆ 9.30 ಗಂಟೆ ಸುಮಾರಿಗೆ ಪಿರ್ಯಾದಿದಾರರು ತನ್ನ ಹೆಂಡತಿ ಮಕ್ಕಳು ಎಲ್ಲರೂ ಸೇರಿ ಹಾವೇರಿಯ ಶಹರ ಪೊಲೀಸ ಠಾಣಾ ವ್ಯಾಪ್ತಿಯ ಹಾವೇರಿಯಿಂದ ರಾಣೇಬೆನ್ನೂರಿಗೆ ಹೋಗುವ ರಸ್ತೆಯ ಪಕ್ಕದ ಶಿವಲಿಂಗನಗರದಲ್ಲಿ ತೊಂಡಿಹಾಳ ಮಿಲ್ಲಿನ ಪಕ್ಕದಲ್ಲಿ ಆರೋಪಿತರಾದ ನೀವು ಅಡ್ಡಾಡುತ್ತಿದ್ದ ತಮ್ಮ ಖುಲ್ಲಾ ಜಾಗೆಯಲ್ಲಿ ಮಣ್ಣು ಹಾಕುತ್ತಿದ್ದಾಗ 1 ರಿಂದ 5 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಗುಂಪುಕಟ್ಟಿಕೊಂಡು ಬಂದು **ಭಾರತೀಯ**

**ದಂಡ ಸಂಹಿತೆ ಕಲಂ *143* ಸಹಕಲಂ *149*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಅಪರಾಧ ಮಾಡುವ ಸಮಾನ ಉದ್ದೇಶದಿಂದ ದೊಂಬಿ ಎಬ್ಬಿಸುವ ಸಂಬಂಧ ಗುಂಪುಕಟ್ಟಿಕೊಂಡು ಬಂದು **ಭಾರತೀಯ ದಂಡ ಸಂಹಿತೆ ಕಲಂ *147* ಸಹಕಲಂ *149*** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮಾರಕಾಸ್ತ್ರಗಳಿಂದ ದೊಂಬಿ ಎಬ್ಬಿಸಿ **ಭಾರತ ದಂಡ ಸಂಹಿತೆ ಕಲಂ *148* ಸಹಕಲಂ *149*** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾ.ಸಾ-4 ಇವರಿಗೆ ಕೈಯಿಂದಾ ಬೆನ್ನಿಗೆ ಎದೆಗೆ, ಬಲಗೈ ಮೊಣಕೈಗೆ ಗುದ್ದಿ ಅಲ್ಲದೇ 2 ನೇ ಆರೋಪಿತನಾದ ನೀನು ಚಾ.ಸಾ-6 ನೇದವರಿಗೆ ದೂಡಿದಾಗ ಅವರು ಜೋಲಿ ಹೋಗಿ ನೆಲಕ್ಕೆ ಬಿದ್ದಾಗ ಅವರ ಬಲಗೈ ಹೆಬ್ಬೆರಳು ಮತ್ತು ತೋರು ಬೆರಳಿನ ಮದ್ಯ ಏನೋ ನೆಟ್ಟು ಸಾದಾಗಾಯಪಡಿಸಿ ಅಲ್ಲದೇ ಚಾ.ಸಾ-5 ಇವರಿಗೆ ದೂಡಿ ನೆಲಕ್ಕೆ ಕೆಡವಿ ಬಲಗೈ ಮೊಣಕೈ ಹತ್ತಿರ ಸಾದಾ ತೆರಚಿದ ಗಾಯಪಡಿಸಿದ್ದು ಅಲ್ಲದೇ 1 ಮತ್ತು 2 ನೇ ಆರೋಪಿತರಾದ ನೀವು ಪಿರ್ಯಾದಿದಾರರಿಗೆ ಕೈಯಿಂದಾ ಎದೆಗೆ ಮೈಕೈಗೆ ಹೊಡೆದು ದುಖಾಃಪತ್ತಪಡಿಸಿ **ಭಾರತೀಯ ದಂಡ ಸಂಹಿತೆ ಕಲಂ *323* ಸಹಕಲಂ *149*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು 1 ನೇ ಆರೋಪಿತನಾದ ನೀನು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಉಳಿದ ಆರೋಪಿತರೊಂದಿಗೆ ಸೇರಿ

ಚಾ.ಸಾ-6 ನೇದವರಿಗೆ ಕಲ್ಲಿನಿದಿಂದ ಬಲಗಾಲ ಪಾದ ಮೇಲೆ ಹೊಡೆದು ಗಾಯಪಡಿಸಿದ್ದು ಅಲ್ಲದೇ 3 ನೇ ಆರೋಪಿತನಾದ ನೀನು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಇತರ ಆರೋಪಿತರೊಂದಿಗೆ ಸೇರಿ ಕಲ್ಲಿನಿಂದ ಚಾ.ಸಾ-6 ನೇದವರ ತಲೆಗೆ ಹೊಡೆದುಸಾದಾಗಾಯಪಡಿಸಿ **ಭಾರತೀಯ ದಂಡ ಸಂಹಿತೆ ಕಲಂ *324* ಸಹಕಲಂ *149* ರಡಿಯಲ್ಲಿ** ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಪಿರ್ಯಾದಿ ಮತ್ತು ಸಾಕ್ಷಿದಾರರಿಗೆ ನಾವು ಅಡ್ಡಾಡುವ ದಾರಿಯಲ್ಲೇ ಯಾಕು ಮಣ್ಣು ಹಾಕುತ್ತರಿ ಸೂಳೆ ಮಕ್ಕಳ ಅಂತಾ ಅವಾಚ್ಯ ಶಬ್ದಗಳಿಂದ ಬೈದು **ಭಾರತೀಯ ದಂಡ ಸಂಹಿತೆ ಕಲಂ *504* ಸಹಕಲಂ *149* ರಡಿಯಲ್ಲಿ** ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಗೆ ಮತ್ತು ಉಳಿದ ಸಾಕ್ಷಿದಾರರಿಗೆ ಇಲ್ಲೇ ಇದ್ದ ಬಾಳೆ ಮಾಡ್ರಿ ನಿಮ್ಮನ್ನು ಜೀವ ಸಹಿತ ಬಿಡೋದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿ **ಭಾರತೀಯ ದಂಡ ಸಂಹಿತೆ ಕಲಂ *506* ಸಹಕಲಂ *149*** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ದಿನಾಂಕ 29 ನೇ ಮಾರ್ಚ ಮಾಹೆಯ 2021 ನೇ ಇಸ್ವಿ.

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

**1.** **ಈ ಮೇಲೆ ಹೇಳಿದ ದೋಷಾರೋಪಣೆಯು ನಿಮಗೆ ಅರ್ಥವಾಗಿದೆಯೇ?**

**ಉತ್ತರಃ 1.**

**2.**

**3.**

**4.**

**5.**

**2. ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿರೋ?**

**ಉತ್ತರಃ *1.***

***2.***

***3.***

***4.***

***5.***

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

***1* ನೇ ಆರೋಪಿಯ ಸಹಿಃ**

***2* ನೇ ಆರೋಪಿಯ ಸಹಿಃ**

***3* ನೇ ಆರೋಪಿಯ ಸಹಿಃ**

***4* ನೇ ಆರೋಪಿಯ ಸಹಿಃ**

***5* ನೇ ಆರೋಪಿಯ ಸಹಿಃ**